# ಜಡಚೈತನ್ಯ

ವಿಜ್ಞಾನವು ಪ್ರಮುಖವಾಗಿ ವಸ್ತುತಂತ್ರವನ್ನು ಕುರಿತು ಚಿಂತಿಸುತ್ತದೆ. ಈ ವಸ್ತುತಂತ್ರಗಳು ನಾವು ಲೋಕದಲ್ಲಿ ಪರಿಭಾವಿಸುವ ಸಮಸ್ತ ಪಡಿಪದಾರ್ಥಗಳನ್ನು ಕುರಿತಿರುತ್ತವೆ. ವಿಜ್ಞಾನವು ನಿಖರವಾದುದೆಂದೂ ತರ್ಕದ ಬಲವನ್ನು ಹೊಂದಿರುವುದೆಂದೂ ವಾಸ್ತವ ತತ್ವವನ್ನು ತಿಳಿಸುತ್ತದೆಂದೂ ಆ ಶಾಸ್ತ್ರವನ್ನು ಬಲ್ಲವರು ಹೇಳುತ್ತಾರೆ. ಇದು ಪ್ರಮುಖವಾಗಿ ಪ್ರಯೋಗದ ಬಲವನ್ನು ಆಧರಿಸಿದೆ. ಉದಾ: ಕಲ್ಲು ಜಡಪದಾರ್ಥವೆಂದು ತಿಳಿಸುತ್ತಾ ನಾವು ಕಾಣುವ ಜಗತ್ತಿನಲ್ಲಿ ಕೆಲವು 'ಜಡ' ಪದಾರ್ಥಗಳಿವೆಯೆಂದೂ ಇನ್ನು ಕೆಲವು 'ಚೈತನ್ಯ' ಪದಾರ್ಥಗಳೆಂದೂ ವಿಜ್ಞಾನಶಾಸ್ತ್ರವು ಹೇಳುತ್ತದೆ.

ಇಲ್ಲಿ ಜಡ ಮತ್ತು ಚೈತನ್ಯ ಎಂಬ ಪರಿಕಲ್ಪನೆಗಳು ವಿಜ್ಞಾನದ ತಥ್ಯದ ಮೇಲೆ ನಿಂತಿದೆ. ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶವೊಂದಿದೆ. ಭಾರತೀಯ ವಿಜ್ಞಾನ ಮತ್ತು ದರ್ಶನಾಶಾಸ್ತ್ರಗಳು ಆಧುನಿಕ ವಿಜ್ಞಾನವು ಹೇಳುವ ಮಾತನ್ನು ಒಪ್ಪುವುದಿಲ್ಲ. ಭಾರತೀಯ ದರ್ಶನಗಳು ಸಮಸ್ತವೂ 'ಚೈತನ್ಯ'ವೆಂದೇ ಪರಿಭಾವಿಸುತ್ತವೆ. ಪ್ರಾಚೀನ ಉಪನಿಷತ್ತುಗಳು ಸಮಸ್ತ ವಸ್ತುಜಾತಗಳು ಚೈತನ್ಯದ ಲೀಲೆಯೆಂದೇ ಹೇಳುತ್ತದೆ. ಪಂಚಭೂತಗಳು, ಪಂಚೇಂದ್ರಿಯಗಳು, ಜ್ಞಾನರೂಪ ಮತ್ತು ಕ್ರಿಯಾರೂಪ ಎರಡೂ ಚೈತನ್ಯದ ಲೀಲೆಯೇ ಆಗಿದೆಯೆಂದು ಸಾರುತ್ತವೆ. ಈ ಸಂಗತಿಯನ್ನು ಇನ್ನಷ್ಟು ಅರ್ಥಮಾಡಿಕೊಳ್ಳಲು ಮತ ಮತ್ತು ವಿಜ್ಞಾನ ಇವುಗಳ ನಡುವಣ ತಾತ್ವಿಕ ಸಂಗತಿಯನ್ನು ತಿಳಿಯುವುದು ಅವಶ್ಯ.

ಹೇಳಿಕೇಳಿ ನಾವು ವಿಜ್ಞಾನಯುಗದಿಂದ ದಾಟಿ 'ತಾಂತ್ರಿಕಯುಗ'ದಲ್ಲಿ ನೆಲೆಯೂರಿ ನಿಂತಿದ್ದೇವೆ. ಮತದ ಸತ್ಯ ವಿಜ್ಞಾನದ ಸತ್ಯಕ್ಕಿಂತ ಭಿನ್ನವಾದುದೇನೋ ಸರಿ. ಹಾಗೆ ನೋಡಿದರೆ, ಮತ ಮತ್ತು ವಿಜ್ಞಾನ ತಿಳಿಸುವ ಸತ್ಯಗಳು ಒಂದೇ. ಆದರೆ, ಅವೆರಡರಲ್ಲಿ ಒಂದು ಅನವಶ್ಯಕವಾಗುತ್ತದೆ. ನಮ್ಮಲ್ಲಿ ಕಾಮ, ಕ್ರೋಧ, ಮೋಹ, ಮದ, ಮಾತ್ಸರ್ಯ ಮುಂತಾದ ಭಾವಗಳಿವೆ. ಇವುಗಳನ್ನು ಹದಗೊಳಿಸಿ ಚಿತ್ತಸ್ವಾಸ್ಥ್ಯವನ್ನು ಮೂಡಿಸುವುದೂ ದ್ವೇಷಾಸೂಯೆಗಳನ್ನು ಪ್ರೀತಿಯಾಗಿ ಪರಿವರ್ತಿಸುವುದೂ ಪರಸ್ಪರ ನಡವಳಿಕೆಯಲ್ಲಿ ನ್ಯಾಯವನ್ನು ಏರ್ಪಡಿಸುವುದೂ 'ಮತ'ದ ಉದ್ದೇಶವೆಂಬುದು ಸ್ಪಷ್ಟ! ಆದರೆ, ವಿಜ್ಞಾನವು ಈ ಸಂಗತಿಗಳನ್ನು ಎಂದಿಗೂ ಮಾಡಲಾರದು. ಅದು ಹೊರಪ್ರಪಂಚದ ವಸ್ತುಗಳನ್ನು ಕುರಿತ ಸತ್ಯವನ್ನೂ ಉಪಯೋಗಕಾರಿಗಳನ್ನಾಗಿ ಮಾಡಿಕೊಳ್ಳುವ ತಂತ್ರಗಳ ಸ್ವರೂಪವನ್ನೂ ತಿಳಿಸುತ್ತದೆ. ಇವು ಮಾತ್ರ ವಿಜ್ಞಾನಕ್ಕೆ ಸಂಬಂಧಿಸಿದ ಸತ್ಯಗಳು! ಮತ ಮತ್ತು ವಿಜ್ಞಾನಗಳ ಪರಿಮಿತಿ, ದೃಷ್ಟಿ ಧ್ಯೇಯಗಳು ಬೇರೆ ಬೇರೆಯಾಗುವುದು ಈ ಕಾರಣದಿಂದಲೇ. ಹೀಗಾಗಿ, ಒಂದು ಇನ್ನೊಂದು ಮಾಡಲಾರದು. ಹಾಗೆ ಮಾಡಲು ಹೋದಾಗ ಅನಗತ್ಯವಾದ ಕ್ಲೇಶಗಳು ಉಂಟಾಗುತ್ತವೆ. ಅವೆರಡು ಬೇರೆಬೇರೆಯಾಗಿರುವುದರಿಂದಲೇ ಮನುಷ್ಯಜಾತಿಗೆ ಅವು ಬೇಕಾಗಿವೆ.

ಹೀಗೆ ವಿಜ್ಞಾನ ಮತ್ತು ಮತದ ನಿಲುವುಗಳು ಬೇರೆ ಬೇರೆ ಆಗಿರುವುದು ಸೂರ್ಯಸ್ಪಷ್ಟ. ಆದರೆ, ಮತಕ್ಕೆ ಸೇರಿದ ಸಂಗತಿಗಳು ಹತ್ತಾರಿವೆ. ಯೋಗವಿಜ್ಞಾನ, ಪರಾಮರ್ಶನಶಾಸ್ತ್ರ, ಆಯುರ್ವೇದ, ವೈಶೇಷಿಕ ದರ್ಶನ, ವೇದಾಂತ ಮುಂತಾದುವು ವಿಜ್ಞಾನ ಹೇಳುವ ಸಂಗತಿಗಳಿಗಿಂತ ಭಿನ್ನವಾಗಿವೆ. ಕನ್ನಡದ ಹಿರಿಯ ವಿದ್ವಾಂಸರೂ ಬರಹಗಾರರೂ ಆಗಿದ್ದ ದೇವುಡು ನರಸಿಂಹಶಾಸ್ತ್ರಿಗಳು ಭಾರತೀಯ 'ಯೋಗವಿಜ್ಞಾನ'ವೇ ಮುಂತಾದ ಹಲವಾರು ವಿಷಯಗಳಲ್ಲಿ ಅಸಾಧಾರಣ ಶಕ್ತಿಯನ್ನು ಪಡೆದಿದ್ದರು. ಅವರು ಒಮ್ಮೆ ಬೆಳಗೆರೆ ಕೃಷ್ಣಶಾಸ್ತ್ರಿಗಳ ಜೊತೆ ಇರುವಾಗ ನಡೆದ ಸಂದರ್ಭ 'ಜಡಚೈತನ್ಯ'ದ ಸಂಗತಿಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ ಆದ ಅನುಭವವನ್ನು ಅವರ ಮಾತಿನಲ್ಲೇ ನಿರೂಪಿಸಲಾಗಿದೆ: 'ಜಡಚೇತನ ಎಂಬ ಎರಡು ಮಾತುಗಳಿವೆ. ಅವು ಬೇರೆ ಬೇರೆಯೋ ಅಥವ ಅವೆರಡೂ ಒಂದೆಯೋ.' ಈ ಮಾತು ಕೇಳಿ ದೇವುಡು ನರಸಿಂಹಶಾಸ್ತ್ರಿಗಳು 'ಇದನ್ನು ವಿವರಿಸಬೇಕೋ ಸಿದ್ಧಾಂತಿಸಬೇಕೋ?' ಎಂದರು.

ಇದು ಸಿದ್ಧಾಂತವಾಗಲೆಂದು ನಾನು ಅವರಲ್ಲಿ ಕೋರಿಕೊಂಡೆ. ಅವರು ಧ್ಯಾನದಲ್ಲಿ ಇರುವಂತೆ ಹೇಳಿ ಶರೀರದ ಕೆಲವು ಭಾಗಗಳನ್ನು ಮುಟ್ಟಿ ಮನಸ್ಸಿನ ಧ್ಯಾನ ಆಯಾಯ ಜಾಗದಲ್ಲಿ ಕೇಂದ್ರವಾಗುವಂತೆ ಸೂಚಿಸಿದರು. ಅವರು ಹೃದಯ, ಕಂಠ, ಭ್ರೂಮಧ್ಯ, ಕಂಠದ ಹಿಂಬದಿ, ಬಲಬದಿ, ಬಲಭುಜ, ಹೀಗೆ ಹಲವು ಸ್ಥಳಗಳನ್ನು ಮುಟ್ಟಿದರು. ಹದಿನೈದು ನಿಮಿಷ ಆಗಿರಬೇಕು. ಅಂಗೈಯಲ್ಲಿ ಏನೋ ಭಾರ ಇರುವಂತೆ ಕಾಣಿಸಿತು. ಅದು ಸ್ವಲ್ಪ ಸ್ವಲ್ಪವಾಗಿ ಕಂಪಿಸಿದಂತಾಯಿತು. ಅದು ಬರಬರುತ್ತಾ ತೀವ್ರವಾಯಿತು. ನಾನು ಕಣ್ಣುಮುಚ್ಚಿಕೊಂಡೇ ಇದ್ದೆ. ಸ್ವಲ್ಪಹೊತ್ತಿಗೆ 'ಕೈಯಲ್ಲಿರುವುದು ಜಡವೋ ಚೇತನವೋ ನಿಮ್ಮ ಅನುಭವ ಹೇಳಿ' ಎಂದರು. ನಾನು ಚೇತನದ ಅನುಭವವನ್ನು ಹೇಳಿದೆ. ಕಣ್ಣುತೆರೆಯಲು ಹೇಳಿದರು. ನಾನು ಕಣ್ಣುತೆರೆದಾಗ ಅಂಗೈಯಲ್ಲಿ ಗುಂಡುಕಲ್ಲು ಇತ್ತು. ಅದು ಇನ್ನೂ ತೀವ್ರಕಂಪನದ ಸ್ಥಿತಿಯಲ್ಲಿಯೇ ಇತ್ತು.

ಆ ಗುಂಡುಕಲ್ಲು ಕಣ್ಣಿನಿಂದ ನೋಡಿದಾಗ ಜಡ. ಆದರೆ, ಆದ ಅನುಭವವೇ ಬೇರೆ. ನಾವು ಚಲಿಸಿದರೆ ಚೇತನವೆಂದು ಕರೆಯುತ್ತೇವೆ; ಚಲಿಸದಿದ್ದರೆ ಜಡವೆಂದು ಕರೆಯುತ್ತೇವೆ. ಇದು ಸಾಮಾನ್ಯವಾಗಿ ಎಲ್ಲರ ನಿಶ್ಚಯ. ಆದರೆ, ಯಾವುದೇ ವಸ್ತು ಜಡವಲ್ಲ; ಅವೆಲ್ಲವೂ ಚೈತನ್ಯ! ಇದು ಭಾರತೀಯ 'ಯೋಗಶಾಸ್ತ್ರ' ನಮಗೆ ಜಡ ಚೈತನ್ಯಗಳನ್ನು ತಿಳಿಸುವ ಕ್ರಮ. ವಿಜ್ಞಾನವು ಒಂದು ಹಂತದ ವರೆಗೆ ನಮ್ಮೊಡನೆ ಬಂದು ನಿಲ್ಲುತ್ತದೆ. ಅನಂತರ ಯೋಗವಿಜ್ಞಾನ ಅಧ್ಯಾತ್ಮದರ್ಶನಗಳು ಉಳಿದ ದಾರಿಯನ್ನು ಕ್ರಮಿಸುತ್ತವೆ! ಹೀಗಾಗಿಯೇ ಕುವೆಂಪು 'ತೆಗೆ ಜಡವೆಂಬುದು ಸುಳ್ಳು. ಚೈತನ್ಯದ ಲೀಲೆ' ಎಂದರು. ಬೇಂದ್ರೆ ಅವರು 'ಚೈತನ್ಯದ ಪೂಜೆ' ಮಾಡಿದರು. ಇವೆರಡು ದಾರಿಗಳ 'ಸತ್ಯಯಾನ' ನಮಗೆ ಬೇಕಲ್ಲವೆ?

■ ಪುರಂಜೀವಿ

## ಮಾತೇ ಮುತ್ತು

◆ ಲೋಕಕ್ಕೋಸ್ಕರ ಮತವೇ ಹೊರತು ಮತಕ್ಕೋಸ್ಕರ ಲೋಕವಲ್ಲ.

—ಡಿ.ವಿ.ಜಿ.

◆ ನನಗೆ ನನ್ನ ಹೃದಯವೇ ದೇವಾಲಯ, ಕರುಣೆಯೇ ತತ್ವ, ಇದೇ ನನ್ನ ಧರ್ಮ.

—ದಲೈಲಾಮ

◆ ವಿವೇಕ ಎಂದರೆ ಬಿಡಿಸಿ ನೋಡುವುದು, ವಿಶ್ಲೇಷಿಸುವುದು, ತೂಗುವುದು, ಅಳೆಯುವುದು.

—ಎಂ. ಗೋಪಾಲಕೃಷ್ಣ ಅಡಿಗ

◆ ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ; ಪೂರ್ಣ ದುಃಖಿಯೂ ಅಲ್ಲ.

—ಗೌತಮ ಬುದ್ಧ

◆ ಒಳ್ಳೆಯ ಕೆಲಸಗಳನ್ನು ಮಾಡುವುದು ಹಾಗೂ ಬೇರೆಯವರು ಅವನ್ನು ಮಾಡುವಂತೆ ಪ್ರೇರೇಪಿಸುವುದು ಮನುಷ್ಯನ ಕರ್ತವ್ಯ.

—ಕುರಾನ್

◆ ಜಗತ್ತಿನಲ್ಲಿರುವ ಸಕಲ ಜೀವಿಗಳನ್ನು ಪ್ರೀತಿಸು.

—ಏಸು ಕ್ರಿಸ್ತ

◆ ಬೇರೆ ಬೇರೆ ಧರ್ಮಗಳನ್ನು ಒಳಹೊಕ್ಕು ನೋಡಿದರೂ ಎಲ್ಲಾ ಧರ್ಮಗಳ ತಿರುಳು ಒಳ್ಳೆಯದನ್ನು ಬಯಸುವುದೇ ಆಗಿದೆ.

—ಸ್ವಾಮಿ ವಿವೇಕಾನಂದ

◆ ಪಕ್ಷ ಎನ್ನುವುದು ಕೆಲವರ ಲಾಭಕ್ಕಾಗಿ ಅನೇಕರಿಗೆ ಹಿಡಿದಿರುವ ಹುಚ್ಚು.

—ಅಲೆಕ್ಸಾಂಡರ್ ಪೋಪ್